# ಉಪ್ಪಿ ಚದುರಂಗ

**ಬುದ್ಧಿವಂತರ ಹೆಸರು ಹೇಳಿಕೊಂಡು ಸಿನಿಮಾದಲ್ಲಿ ಒಂದಷ್ಟು ಸೌಂಡು ಮಾಡಿದ ಉಪೇಂದ್ರ, ರಾಜಕಾರಣದಲ್ಲೀಗ 'ಪ್ರಜ್ಞಾವಂತ' ಎನ್ನುವ ಮಂತ್ರ ಜಪಿಸುತ್ತಿದ್ದಾರೆ. ಈ ನಡುವೆ, ಅವರ ಅಭಿನಯದ 'ಉಪೇಂದ್ರ ಮತ್ತೆ ಬಾ' ಸಿನಿಮಾ ತೆರೆ ಕಾಣಲು ಸಿದ್ಧವಾಗಿದೆ.**

■ **ರಘು**



ಉಪೇಂದ್ರ ಮತ್ತೆ ಸುದ್ದಿಯಲ್ಲಿದ್ದಾರೆ. ಈ ಬಾರಿ ಸುದ್ದಿಯಲ್ಲಿರುವುದು ರಾಜಕಾರಣದ ದೆಸೆಯಿಂದಲ್ಲ; ಸಿನಿಮಾ ಕಾರಣದಿಂದಾಗಿ. ಅವರ ಅಭಿನಯದ 'ಉಪೇಂದ್ರ ಮತ್ತೆ ಬಾ' ಸಿನಿಮಾ ಈಗ ತೆರೆ ಕಾಣಲು ಸಿದ್ಧವಾಗಿದೆ. ಕೆಲವು ತಿಂಗಳ ಹಿಂದೆಯೇ ಸಿನಿಮಾ ತಯಾರಾಗಿದ್ದರೂ, ಬಿಡುಗಡೆಯ ಮುಹೂರ್ತ ಕೂಡಿಬಂದಿರುವುದು ಈಗ.

'ಉಪೇಂದ್ರ ಮತ್ತೆ ಬಾ' ಎನ್ನುವ ಶೀರ್ಷಿಕೆಯೇ ಉಪೇಂದ್ರರ ಈ ಹೊತ್ತಿನ ಮನಸ್ಥಿತಿಯನ್ನು ಸೂಚಿಸುವಂತಿದೆ. ಒಂದೆಡೆ ಚಿತ್ರರಂಗದಲ್ಲಿ ಮರಳಿ ಫಾರ್ಮ್ ಕಂಡುಕೊಳ್ಳಬೇಕಾದ ಅನಿವಾರ್ಯತೆಯಲ್ಲಿರುವ ಅವರು, ರಾಜಕಾರಣದ ದೋಣಿಗೂ ಕಾಲಿಟ್ಟಿದ್ದಾರೆ. ವಿಧಾನಸಭಾ ಚುನಾವಣೆಗಳು ಹೊಸ್ತಿಲಲ್ಲಿರುವ ಸಂದರ್ಭದಲ್ಲಿ ಉಪೇಂದ್ರರ ಈ ದ್ವಿಪಾತ್ರಾಭಿನಯ ಕುತೂಹಲ ಹುಟ್ಟಿಸುವಂತಿದೆ.

'ಸೊಗ್ಗಾಡೆ ಚಿನ್ನಿನಾಯನ' ಅಕ್ಕಿನೇನಿ ನಾಗಾರ್ಜುನ ಅಭಿನಯದ ಯಶಸ್ವಿ ತೆಲುಗು ಸಿನಿಮಾ. ಈ ಚಿತ್ರದ ಕನ್ನಡ ಅವತರಣಿಕೆ 'ಉಪೇಂದ್ರ ಮತ್ತೆ ಬಾ'. ಅರುಣ್ ಲೋಕನಾಥ್ ಕನ್ನಡ ಸಿನಿಮಾದ ನಿರ್ದೇಶಕರು. ಈ ಮುನ್ನ ಉಪೇಂದ್ರರ 'ಎಚ್2ಒ' ಸಿನಿಮಾ ನಿರ್ದೇಶಿಸಿದ್ದ ಅರುಣ್, ಈಗ ಮತ್ತೊಮ್ಮೆ ತಮ್ಮ ನೆಚ್ಚಿನ ನಟನ ಚಿತ್ರದ ಮೂಲಕ ಯಶಸ್ಸು ಕಾಣುವ ತವಕದಲ್ಲಿದ್ದಾರೆ.

ತೆಲುಗು ಚಿತ್ರದ ಅವತರಣಿಕೆಯಾದರೂ ಕನ್ನಡ ಚಿತ್ರದಲ್ಲಿ ಸಾಕಷ್ಟು ಬದಲಾವಣೆ ಇದೆಯಂತೆ. ಉಪೇಂದ್ರ ದ್ವಿಪಾತ್ರದಲ್ಲಿ ನಟಿಸಿದ್ದು, ಹೆಚ್ಚೂ ಕಡಿಮೆ ಚಿತ್ರದ ಪ್ರತಿ ಫ್ರೇಮ್‌ನಲ್ಲೂ ಅವರಿರುವುದು ಖಚಿತವಾಗಿದೆ. ಅಭಿಮಾನಿಗಳಿಗಿದು ಭರಪೂರ ಮನರಂಜನೆಯ ಸಿನಿಮಾ ಎಂದು ಚಿತ್ರತಂಡ ಹೇಳಿಕೊಳ್ಳುತ್ತಿದೆ.

ಉಪೇಂದ್ರರ ಯಶಸ್ವಿ ಚಿತ್ರಗಳಲ್ಲೊಂದಾದ 'ಉಪೇಂದ್ರ' ಚಿತ್ರದ ಛಾಯೆ ಕೂಡ ಈ ಸಿನಿಮಾದಲ್ಲಿದೆ ಎನ್ನಲಾಗುತ್ತಿದೆ. ಅದಕ್ಕೆ ತಕ್ಕನಾಗಿ 'ಉಪೇಂದ್ರ' ಚಿತ್ರದ ನಾಯಕಿ ಪ್ರೇಮಾ ಈ ಸಿನಿಮಾದಲ್ಲೂ ಇದ್ದಾರೆ. ಇದರ ಜೊತೆಗೆ 'ಎ' ಸಿನಿಮಾ ಖ್ಯಾತಿಯ ಚಾಂದಿನಿ ಮುಖ್ಯ ಪಾತ್ರವೊಂದರಲ್ಲಿ ಕಾಣಿಸಿಕೊಂಡಿದ್ದಾರೆ. ಹರ್ಷಿಕಾ ಪೂಣಚ್ಚ ತಾರಾಗಣದಲ್ಲಿರುವ ಮತ್ತೊಬ್ಬ ಪ್ರಸಿದ್ಧ ತಾರೆ.

ಶ್ರುತಿ ಹರಿಹರನ್ ಚಿತ್ರದ ಮತ್ತೊಂದು ಆಕರ್ಷಣೆ. ಉಪೇಂದ್ರ ಹಾಗೂ ಶ್ರುತಿ ಮೊದಲ ಬಾರಿಗೆ ಒಟ್ಟಿಗೆ ತೆರೆ ಹಂಚಿಕೊಂಡಿದ್ದಾರೆ. ಉಪೇಂದ್ರರ ಸಂಭಾಷಣೆ ಹಾಗೂ ಶ್ರೀಧರ್ ವಿ. ಸಂಭ್ರಮ್ ಸಂಗೀತ ಚಿತ್ರಕ್ಕಿದೆ.

ಉಪೇಂದ್ರರ ಪಾಲಿಗೆ ಈ ಸಿನಿಮಾ ಗೆಲ್ಲುವುದು ಬಹಳ ಮುಖ್ಯವಾಗಿದೆ. ಅವರ ಹಿಂದಿನ ಸಿನಿಮಾಗಳಾದ 'ಮುಕುಂದ ಮುರಾರಿ' ಹಾಗೂ 'ಕಲ್ಪನಾ 2' ಚಿತ್ರಗಳು ಪ್ರೇಕ್ಷಕರ ಮನಸ್ಸು ಗೆಲ್ಲುವಲ್ಲಿ ವಿಫಲವಾಗಿದ್ದವು. ಸದ್ಯಕ್ಕೆ ಚಿತ್ರರಂಗದಲ್ಲಿ ಉಪೇಂದ್ರರ ಕ್ರೇಜ್ ಚಿತ್ರರಸಿಕರಲ್ಲಿ ಕಂಪನಗಳನ್ನು ಹುಟ್ಟಿಸುವ ಕ್ರೇಜ್ ಉಳಿಸಿಕೊಂಡಿಲ್ಲ. 'ಉಪ್ಪಿ ರುಪ್ಪಿ', 'ಕನ್ನೇಶ್ವರ', 'ಡಿಯರ್ ಮೋದಿ' ಸೇರಿದಂತೆ ಉಪೇಂದ್ರರ ಹೊಸ ಸಿನಿಮಾಗಳ ಚಟುವಟಿಕೆಗಳಲ್ಲಿ ಉತ್ಸಾಹವೇನೂ ಕಾಣಿಸುತ್ತಿಲ್ಲ.

ಸಿನಿಮಾ ಬದುಕಿಗೆ ಇಪ್ಪತ್ತೈದು ವರ್ಷಗಳಾಗಿರುವ ಸಂದರ್ಭದಲ್ಲಿ ಉಪೇಂದ್ರ ಸಂದಿಗ್ಧ ಪರಿಸ್ಥಿತಿ ಎದುರಿಸುತ್ತಿದ್ದಾರೆ. ನಟನಾಗಿ ಮಾತ್ರವಲ್ಲದೆ, ನಿರ್ದೇಶಕನಾಗಿ ಕೂಡ ಅವರ ಫಾರ್ಮ್ ಕೈಕೊಟ್ಟಂತಿದೆ. ಹೀಗೆ, ಸಿನಿಮಾ ಬದುಕು ಡೋಲಾಯಮಾನ ಆಗಿರುವ ಸಂದರ್ಭದಲ್ಲಿ ಅವರು 'ಕರ್ನಾಟಕ ಪ್ರಜ್ಞಾವಂತರ ಜನತಾ ಪಕ್ಷ' ಎನ್ನುವ ರಾಜಕೀಯ ಪಕ್ಷ ಕಟ್ಟಿದ್ದಾರೆ. ಪರ್ಯಾಯ ರಾಜಕಾರಣ ಮಾಡುವುದಾಗಿ ಹೇಳಿದ್ದಾರೆ. ಬುದ್ಧಿವಂತರ ಹೆಸರು ಹೇಳಿಕೊಂಡು ಸಿನಿಮಾದಲ್ಲಿ ಒಂದಷ್ಟು ಸೌಂಡು ಮಾಡಿದ ಅವರು, ರಾಜಕಾರಣದಲ್ಲೀಗ ಪ್ರಜ್ಞಾವಂತರ ಜಪ ಮಾಡುತ್ತಿದ್ದಾರೆ.